**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 439-25** **ಪಿಡಬ್ಲ್ಯೂ ಃ 3**

**ಸಿಡಬ್ಲ್ಯೂ ಃ 10**

ಸಾಕ್ಷಿದಾರರ ಹೆಸರು ಃ ನಿಖಿಲ್ ನೀಲಗಾರ

ತಂದೆ ಹೆಸರು ಃ ಪ್ರಮೋದ

ವಯಸ್ಸು ಃ 33 ವರ್ಷ

ಉದ್ಯೋಗ ಃ ವ್ಯಾಪಾರ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಆರೋಪಿ ಪರಿಚಯವಿದೆ. ಸುಮಾರು 8 – 10 ತಿಂಗಳ ಹಿಂದೆ ಸ್ಟೇಶನ್ ರೋಡಿನಲ್ಲಿ ಒಂದು ಅಪಘಾತ ವಾಗಿ ಒಬ್ಬ ಮಹಿಳೆ ಕಾಲಿಗೆ ಗಂಭೀರ ಸ್ವರೂಪದ ಗಾಯವಾಗಿತ್ತು. ಸದರಿ ಅಪಘಾತ ವು ಹೇಗೆ ಆಗಿದೆ ಅಂತಾ ಗೊತ್ತಿಲ್ಲ. ನಾನು ಅಪಘಾತ ವನ್ನು ಕಣ್ಣಾರೆ ನೋಡಿಲ್ಲ. ಸ್ಥಳದಲ್ಲಿ ಒಂದು ಆರು ಚಕ್ರದ ವಾಹನವಿದ್ದು, ಅದರ ಚಾಲಕ ಆರೋಪಿ ಇದ್ದನು. ಗಾಯಗೊಂಡ ಚಿಕಿತ್ಸೆ ಫಲಕಾರಿಯಾಗದೇ ಮಹಿಳೆ ಮರಣ ಹೊಂದಿದ್ದಾಳೆ ಅಂತಾ ತಿಳಿದುಬಂದಿತು. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 27.8.2024 ರಂದು ರಾತ್ರಿ 10 ಗಂಟೆಗೆ ನಾನು ಕಾಮತ್ ಹೊಟೇಲ್ ಬಳಿ ಮನೆಗೆ ಹೋಗಲು ಬಸ್ ಕಾಯುತ್ತಿರುವಾಗ ನ್ಯಾಯಾಲಯದ ಮುಂದಿರುವ ಆರೋಪಿ ತನ್ನ ಗೂಡ್ಸ ವಾಹನ ನಂಃ ಕೆಎ-26 ಎ/2672 ನೇದ್ದನ್ನು ಗದಗ ಕಡೆಯಿಂದ ಬಿ ಎಸ್ ಎನ್ ಎಲ್ ಕಚೇರಿ ಕಡೆಗೆ ಅತಿ ವೇಗ ಹಾಗೂ ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಕಾಮತ್ ಹೊಟೇಲ್ ಕಡೆಯಿಂದ ಬಿ ಎಸ್ ಎನ್ ಎಲ್ ಕಚೇರಿ ಕಡೆಗೆ ರೋಡ ದಾಟುತ್ತಿದ್ದ ಪಾದಚಾರಿ ಮಹಿಳೆಗೆ ಡಿಕ್ಕಿಪಡಿಸಿ ಕೆಳಗಡೆಗೆ ಬೀಳಿಸಿ ಅಪಘಾತ ಪಡಿಸಿದ್ದಾನೆ ಅಂದರೆ ಸರಿಯಲ್ಲ.

ಸದರಿ ಅಪಘಾತ ದಲ್ಲಿ ಗಾಯಾಳುವಿನ ಕಾಲಿಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಅವರ ಹೆಸರು ವಿಚಾರ ಮಾಡಲಾಗಿ ನಂದಾದೇವಿ ಕೋಂ. ಸುಖಲಾಲಜಿ ಜೈನ ಅಂತಾ ತಿಳಿದುಬಂದಿತು ಅಂದರೆ ಸರಿಯಲ್ಲ. ಈ ಕುರಿತು ನಾನು ಈಗ ನನಗೆ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು. ದಿಃ 16.9.2024 ರಂದು ಗಾಯಾಳು ಮೃತಪಟ್ಟ ಕುರಿತು ಪೋಲಿಸರಿಗೆ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.